2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 99/2017</u>

| | | |
|---|---|---|
| ಸಾಕ್ಷಿದಾರರ ಹೆಸರು | - ಲಕ್ಷ್ಮಣಗೌಡ | ಪಿಡಬ್ಲೂ -04 |
| ತಂದೆಯ ಹೆಸರು | - ಕಲ್ಲೇಗೌಡ | ಸಿಡಬ್ಲೂ -07 |
| ವಯಸ್ಸು | - 71 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಹಂತೂರು ಗ್ರಾಮ. | |

ದಿನಾಂಕಃ 09.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಸುಮಾರು ಏಳು ವರ್ಷಗಳ ಹಿಂದೆ ಒಂದುದಿನ ನಾನು ಹಂತೂರು ಸೊಸೈಟಿಯ ಬಳಿ ಇದ್ದಾಗ ಪೋಲೀಸರು ಅಲ್ಲಿಗೆ ಬಂದಿದ್ದರು. ಗಲಾಟೆ ನಡೆದ ವಿಚಾರದಲ್ಲಿ ಸ್ಥಳ ಮಹಜರು ಕ್ರಮ ಜರುಗಿಸಿದರು. ಆರೋಪಿತರು ಪಿರ್ಯಾದಿಯ ಮೇಲೆ ಹಾಕಿಸ್ಟಿಕ್ ಹಾಗೂ ಕತ್ತಿಯಿಂದ ಹಲ್ಲೆ ಮಾಡಿದ್ದಾರೆ ಎಂದು ಮಹಜರು ಮಾಡಿದರು. ಚಾಸಾ.2 ಗಣೇಶ ಪೋಲೀಸರಿಗೆ ಸ್ಥಳ ತೋರಿಸಿದ್ದರು. ಮಹಜರು ಜರುಗಿಸಿದಾಗ ಸಮಯ ಮದ್ಯಾಹ್ನ 11.30 ರಿಂದ 12.00 ಗಂಟೆಯಾಗಿತ್ತು. ಮಹಜರು ಕಾಲದಲ್ಲಿನಾನು ಚಾಸಾ.2 ಹಾಗೂ ಚಾಸಾ.8 ಹಾಜರಿದ್ದೆವು. ನಿಪಿ.3 ರಲ್ಲಿ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.3(ಬಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಪೋಲೀಸರು ನಿಪಿ.4 ಮತ್ತು 5 ರಂತೆ ಪೋಟೋ ತೆಗೆದಿದ್ದರು. ಸದರಿ ಪೋಟೋಗಳಲ್ಲಿ ನಾನು, ಚಾಸಾ.2 ಹಾಗುಾ ಚಾಸಾ.8 ಇದ್ದೇವೆ.

<u>ಪಾಟೀ ಸವಾಲು: ಶ್ರೀ ಹೆಚ್.ಎಂ.ಎಸ್., 1 ನೇ ಆರೋಪಿ ಪರವಾಗಿ</u>

(ಈ ಹಂತದಲ್ಲಿ ಆರೋಪಿ ಪರ ವಕೀಲರು ಪ್ರಾಸಾ.1 ಮತ್ತು 2 ರವರ ಪಾಟೀ ಸವಾಲಿನ ನಂತರ ಸಾಕ್ಷಿಯ ಪಾಟೀ ಸವಾಲನ್ನು ನಡೆಸುವುದಾಗಿ ಸಮಯ ಕೋರಿದ್ದು, ರೂ.300/- ಖರ್ಚನ್ನು ನೀಡುವಂತೆ ಆದೇಶಿಸಿ ಸಮಯ ನೀಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ